# ಹಣ್ಣು ಮುಕ್ಕಿತು ‘ಹೂವಿನ ಹಕ್ಕಿ’

■ ಹ.ಸ. ಬ್ಯಾಕೋಡ




ಕೆರೆ ದಂಡೆಯ ಮೇಲೆ ವಾಯುವಿಹಾರಕ್ಕೆ ಹೋದಾಗ ದಂಡೆಯ ಮೇಲೆ ಕೊಡೆಯಾಕಾರದಲ್ಲಿ ಬೆಳೆದು ನಿಂತಿದ್ದ ಗಸಗಸೆ ಗಿಡ ಗಮನಸೆಳೆಯಿತು. ಗಿಡದ ತುಂಬ ಬಿಳಿ ಬಣ್ಣದ ಸಣ್ಣ ಸಣ್ಣ ಹೂವುಗಳು. ನೋಡುತ್ತಿರುವಂತೆಯೇ ಆ ಗಿಡದಿಂದ ಪುಟ್ಟದೊಂದು ಹಕ್ಕಿ ಹಾರಿತು. ಅದರ ಬಾಯಿಯಲ್ಲಿ ಹಳದಿ ಬಣ್ಣದ ಹಣ್ಣು. ಪಕ್ಕದ ಟೊಂಗೆಯಲ್ಲಿಯೇ ಕುಳಿತ ಅದು ಹಣ್ಣನ್ನು ಕಚ್ಚಿ ಕಚ್ಚಿ ರಸವನ್ನು ಹೀರತೊಡಗಿತು.

ಹಕ್ಕಿ ನಿಧಾನವಾಗಿ ಹಣ್ಣು ತಿನ್ನಲು ಪ್ರಯತ್ನಿಸುತ್ತಿತ್ತು. ಆ ಹಣ್ಣು ಸರಿಸುಮಾರು ಆ ಹಕ್ಕಿಯ ತಲೆಗಿಂತ ಕೊಂಚ ಸಣ್ಣದಿತ್ತು. ಪೂರ್ತಿಯಾಗಿ ಹಣ್ಣಾಗಿರದ ಗಸಗಸೆ ಹಣ್ಣು ತಿಳಿಹಳದಿ ಬಣ್ಣಕ್ಕೆ ತಿರುಗಿತ್ತು (ಪೂರ್ತಿ ಹಣ್ಣಾದಾಗ ಗಸಗಸೆ ಹಣ್ಣು ಕೆಂಪು ಬಣ್ಣಕ್ಕೆ ತಿರುಗುತ್ತದೆ). ಆ ಪುಟ್ಟ ಹಕ್ಕಿ ಹಣ್ಣನ್ನು ಆಗಾಗ ಹೊರಳಿಸಿ ಹೊರಳಿಸಿ ಮೇಲಕ್ಕೆ ಹಾರಿಸಿ ತನ್ನ ಚಿಕ್ಕದಾದ ಕೊಕ್ಕಿನಲ್ಲಿ ಬಲವಾಗಿ ಕಚ್ಚಲು ಪ್ರಯತ್ನಿಸುತ್ತಿತ್ತು.

ಒಂದು ಹಣ್ಣನ್ನು ತಿನ್ನಲು ಆ ಪುಟ್ಟ ಹಕ್ಕಿ ಐದಾರು ನಿಮಿಷ ತೆಗೆದುಕೊಂಡಿತು. ಅದು ಹಂತಹಂತವಾಗಿ ಹಣ್ಣನ್ನು ಮೆತ್ತಗೆಗೊಳಿಸಿ ಮುಕ್ಕಿತು. ಕೆಲವು ಕ್ಷಣಗಳ ಬಳಿಕ ತನ್ನ ಚೊಂಚನ್ನು ಟೊಂಗೆಗೆ ಒರೆಸಿ ಶುಚಿಗೊಳಿಸಿಕೊಂಡಿತು.

ಮನೆಗೆ ಬಂದು, ಆ ಹಕ್ಕಿಯ ಬಗ್ಗೆ ತಿಳಿದುಕೊಳ್ಳಲು ಡಾ. ಸಲೀಂ ಆಲಿ ಅವರ ಪುಸ್ತಕದ ಪುಟಗಳನ್ನು ತಿರುವಿ ಹಾಕಿದರೆ ತೆರೆದುಕೊಂಡದ್ದು ಅದ್ಭುತವಾದ ಪಕ್ಷಿಲೋಕ. ಅದು ಸಾಮಾನ್ಯ ಹಕ್ಕಿಯಲ್ಲವೆಂದು ತಿಳಿಯಿತು. ಅದೊಂದು ಬಹು ಅಪರೂಪದ ಹಕ್ಕಿ! ಇಂಗ್ಲಿಷ್‌ನಲ್ಲಿ ‘ಫ್ಲವರ್ ಪೆಕರ್’ (**Flowerpecker**) ಎಂದು ಹೇಳಲಾಗುವ ಈ ಹಕ್ಕಿಯನ್ನು ಕನ್ನಡದಲ್ಲಿ ‘ಹೂವಿನ ಹಕ್ಕಿ’ ಎಂದು ಕರೆಯಲಾಗುತ್ತದೆ. ಈ ಹಕ್ಕಿಗಳು ಚಿಟ್ಟೆಗಳಂತೆ ಹೂವಿನ ಮಕರಂದ ಹೀರುತ್ತವೆ. ಸಿಹಿಯನ್ನು ಹೊಂದಿರುವ ಸಣ್ಣ ಸಣ್ಣ ಹಣ್ಣುಗಳನ್ನು ಮಾತ್ರ ಸೇವಿಸುತ್ತವೆ. ಎತ್ತರದ ಗಿಡಗಳಲ್ಲಿ ಎಲೆಗಳ ನಡುವೆ ಗೂಡು ಕಟ್ಟುವ ಹೂವಿನ ಹಕ್ಕಿಗಳು ಎರಡರಿಂದ ನಾಲ್ಕು ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ತಮ್ಮ ಮರಿಗಳಿಗೆ ಸಣ್ಣ ಕ್ರಿಮಿಕೀಟಗಳನ್ನು ಹಿಡಿದು ತಂದು ಗುಟುಕು ನೀಡುತ್ತವೆ. ಹಾಗೆಯೇ ಹಣ್ಣುಗಳ ರಸವನ್ನು ಮರಿಗಳಿಗೆ ಕೊಕ್ಕಿನಲ್ಲಿ ತಂದು ಕುಡಿಸುತ್ತವೆ.

ಭೂಮಿಯತ್ತ ಮುಖ ಮಾಡಿರುವ ಹೂವುಗಳಲ್ಲಿನ ಮಕರಂದವನ್ನು ಹೂವಿನ ಹಕ್ಕಿಗಳು ತಮ್ಮ ಇಡೀ ದೇಹವನ್ನು ತಲೆಕೆಳಗೆ ಮಾಡಿಕೊಂಡು ಹೀರುತ್ತವೆ. ಕೆಲವೊಮ್ಮೆ ರೆಕ್ಕೆ ಬಡಿಯುತ್ತಲೇ ಹಮ್ಮಿಂಗ್ ಹಕ್ಕಿಯಂತೆ ಹೂವುಗಳಲ್ಲಿನ ಮಕರಂದವನ್ನು ಹಿರುತ್ತವೆ.

‘ಹಮ್ಮಿಂಗ್’ ನಂತರದ ವಿಶ್ವದ ಎರಡನೇ ಸಣ್ಣ ಹಕ್ಕಿ ಇದಾಗಿದೆ. ಏಷ್ಯಾ ಖಂಡದಲ್ಲಿಯೇ ಅತ್ಯಂತ ಸಣ್ಣ ಹಕ್ಕಿಯಾಗಿರುವ ಈ ಹೂವಿನ ಹಕ್ಕಿಗಳು ಬೂದು ಬಣ್ಣವನ್ನು ಹೊಂದಿವೆ. ಕೇವಲ 10ರಿಂದ 18 ಸೆಂ.ಮೀ. ಉದ್ದದ ದೇಹವನ್ನು ಹೊಂದಿರುತ್ತವೆ. ಹೆಣ್ಣು ಹಕ್ಕಿಗಿಂತ ಗಂಡು ಹೂವಿನ ಹಕ್ಕಿ ಹೆಚ್ಚು ಆಕರ್ಷಕ. ಅದರ ಮೈಮೇಲಿನ ಗರಿಗಳು ಹೊಳಪನ್ನು ಹೊಂದಿರುತ್ತವೆ. ಕಣ್ಣಿನ ಸುತ್ತ ಬಿಳಿ ಹುಬ್ಬವನ್ನು ಹೊಂದಿವೆ. ಸಾಮಾನ್ಯವಾಗಿ ಕರ್ನಾಟಕದ ಎಲ್ಲಾ ಪ್ರದೇಶದಲ್ಲಿ ಕಂಡುಬರುವ ಸೂರಕ್ಕಿ (ಸನ್‌ಬರ್ಡ್) ಗಿಂತಲೂ ಹೂವಿನ ಹಕ್ಕಿ ಸಣ್ಣದಾಗಿರುತ್ತದೆ.

ವಿಶ್ವದಲ್ಲಿ ಈ ಹೂವಿನ ಹಕ್ಕಿಗಳಲ್ಲಿ ಒಟ್ಟು 48 ಜಾತಿಗಳಿವೆ. ಅವುಗಳಲ್ಲಿ ಹನ್ನೆರಡು ಜಾತಿಯ ಹೂವಿನ ಹಕ್ಕಿಗಳು ಆಗ್ನೇಯ ಏಷ್ಯಾದಲ್ಲಿವೆ. ಅವುಗಳಲ್ಲಿ ಹೆಚ್ಚಾಗಿ ಮಲೇಷಿಯಾದಲ್ಲಿವೆ. ಹಳದಿ, ಕೆಂಪು, ಕಂದು ಬಣ್ಣದಿಂದ ಕೂಡಿದ ಬಣ್ಣ ಬಣ್ಣದ ಹೂವಿನ ಹಕ್ಕಿಗಳು ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಅಲ್ಲಿನ ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಜೀವಿಸುತ್ತಿವೆ. ತಂಪು ಪ್ರದೇಶಗಳಲ್ಲಿ ಹಾಗೂ ಹಿಮದ ಬೆಟ್ಟಗಳಿರುವ ಪ್ರದೇಶದಲ್ಲಿ ಕಣ್ಮನಸೆಳೆಯುವ ವರ್ಣಮಯವಾಗಿರುವ ಹೂವಿನ ಹಕ್ಕಿಗಳು ಕೂಡ ಇವೆ.